NR-521 GR-350

ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ನಂ.ಸಿ.ಟಿ.ಆರ್.ಎಸ್-2/03/2022-23

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು
ಮತ್ತು ಆಯುಕ್ತರು, ಸಂಚಾರ ಮತ್ತು
ರಸ್ತೆ ಸುರಕ್ಷತೆರವರ ಕಛೇರಿ,
ಕರ್ನಾಟಕ ರಾಜ್ಯ, ನಂ. 2, ನೃಪತುಂಗ ರಸ್ತೆ,
ಬೆಂಗಳೂರು-560 001

ಮಹಾ ನಿರ್ದೇಶಕರು ಮತ್ತು
ಆರಕ್ಷಕ ಮಹಾ ನಿರೀಕ್ಷಕರವರ ಕಛೇರಿ
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ:-07.04.2022

## ಸುತ್ತೋಲೆ

ವಿಷಯ: ಅಪಘಾತಕ್ಕೆ ಒಳಗಾದ ವಾಹನಗಳನ್ನು ಕೂಡಲೇ ಬಿಡುಗಡೆ ಮಾಡುವ ಕುರಿತು.

ಉಲ್ಲೇಖ: 1 ಈ ಕಛೇರಿಯ ಕಾನೂನು ಶಾಖೆಯ ಸುತ್ತೋಲೆ ಸಂಖ್ಯೆ 4984 ದಿನಾಂಕ 10.08.1999

2 ಈ ಕಛೇರಿಯ ಪತ್ರ ಸಂಖ್ಯೆ ಸಿಟಿಆರ್‌ಎಸ್-2/23/2015-16 ದಿನಾಂಕ 20.06.2015

* * *

ಉಲ್ಲೇಖಿತ ಈ ಕಛೇರಿಯ ಸುತ್ತೋಲೆಯ ಕಡೆ ತಮ್ಮ ಗಮನ ಸೆಳೆಯಲಾಗಿದೆ. ಸದರಿ ಸುತ್ತೋಲೆಯಲ್ಲಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಅಪಘಾತಕ್ಕೀಡಾದ ವಾಹನಗಳನ್ನು 24 ಗಂಟೆ ಒಳಗಾಗಿ (ಸೆಕ್ಷನ್ 136 ಎಂ.ವಿ. ಆಕ್ಟ್ 1988) ಮೋಟಾರು ವಾಹನ ಇನ್ಸ್‌ಪೆಕ್ಟರ್ ರವರಿಂದ ತಪಾಸಣೆ ಮಾಡಿಸಿ ಸಂಬಂಧಪಟ್ಟ ವಾಹನ ಮಾಲೀಕರಿಗೆ ಹಿಂತಿರುಗಿಸಲು ತಿಳುವಳಿಕೆ ನೀಡಲಾಗಿತ್ತು. ಆದರೂ ಸಹ ಕೆಲವು ಜಿಲ್ಲೆಗಳಲ್ಲಿ ಈ ಸೂಚನೆಯನ್ನು ನಿರ್ಲಕ್ಷಿಸಿ ವಾಹನಗಳನ್ನು ಪಿ.ಎಫ್.ಗೆ ಅಳವಡಿಸಿ ಸಂಬಂಧಪಟ್ಟ ಮಾಲೀಕರಿಗೆ ಕಿರುಕುಳ ಕೊಡುತ್ತಿದ್ದಾರೆಂದು ತಿಳಿದು ಬಂದಿದೆ.

**ಕಲಂ 136-ಮೋಟಾರು ವಾಹನ ಕಾಯ್ದೆ-1988 ಪ್ರಕಾರ:**

**ಮೋಟಾರು ವಾಹನವು ಒಳಗಾಗಿರುವ ಯಾವುದೇ ಅಪಘಾತ ಸಂಭವಿಸಿದಾಗ, ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಅಗತ್ಯಪಡಿಸಿದಾಗ ತನ್ನ ಅಧಿಕಾರ ಪತ್ರವನ್ನು ತೋರಿಸಿ, ವಾಹನವನ್ನು ಪರಿಶೀಲಿಸಬಹುದು ಮತ್ತು ಆ ಉದ್ದೇಶಕ್ಕಾಗಿ ಯಾವುದೇ ಯುಕ್ತ ಸಮಯದಲ್ಲಿ ವಾಹನವಿರಬಹುದಾದ ಯಾವುದೇ ಆವರಣವನ್ನು ಪ್ರವೇಶಿಸಬಹುದು ಮತ್ತು ಪರಿಶೀಲನೆಗಾಗಿ ಆವಾಹನವನ್ನು ಸ್ಥಳಾಂತರಿಸಬಹುದು:**

**ಪರಂತು, ಆವಾಹನವನ್ನು ಹಾಗೆ ಸ್ಥಳಾಂತರಿಸಲಾದ ಸ್ಥಳದ ಬಗ್ಗೆ ವಾಹನದ ಒಡೆಯನಿಗೆ ತಿಳಿಸತಕ್ಕದ್ದು ಮತ್ತು ಆ ವಾಹನವನ್ನು 24 ಗಂಟೆಗಳೊಳಗೆ ವಾಹನದ ಮಾಲೀಕನಿಗೆ, ಚಾಲಕನಿಗೆ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಗೆ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ತರುವಾಯ ಹಿಂದಿರುಗಿಸತಕ್ಕದ್ದು.**

**Section 136 MV Act 1988:**

**Inspection of vehicle involved in accident**

**When any accident occurs in which a motor vehicle is involved, any person authorised in this behalf by the State Government may, on production if so required of his authority, inspect the vehicle and for that purpose may enter at any reasonable time any premises where the vehicle may be, and may remove the vehicle for examination:**

**Provided that the place to which the vehicle is so removed shall be intimated to the owner of the vehicle and the vehicle shall be returned (after completion of the formalities to the owner, driver or the person in charge of the vehicle within twenty-four hours)**

ಕೆಲವು ಪೊಲೀಸ್ ಅಧಿಕಾರಿಗಳು ಸೆಕ್ಷನ್ 102 ಸಿಆರ್‌ಪಿಸಿ ಪ್ರಕಾರ ಅಪಘಾತಕ್ಕೆ ಒಳಗಾದ ವಾಹನಗಳನ್ನು ಪಿ.ಎಫ್.ಗೆ ಒಳಪಡಿಸಬೇಕು ಎಂಬುದರ ಬಗ್ಗೆ ತಪ್ಪು ಕಲ್ಪನೆಯನ್ನು ಇಟ್ಟುಕೊಂಡು ಇನ್ನೂ ತನಕ ವಾಹನಗಳನ್ನು ಪಿ.ಎಫ್.ಗೆ ಅಳವಡಿಸುವ ರೂಢಿಯನ್ನು ಮುಂದುವರೆಸಿಕೊಂಡು ಬಂದಿದ್ದು, ಇದನ್ನು ಈ ಕೂಡಲೇ ಕೈಬಿಡಬೇಕೆಂದು ಆದೇಶಿಸಲಾಗಿದೆ. ಏಕೆಂದರೆ ಅಪಘಾತವಾದ ವಾಹನಗಳನ್ನು ಪಿ.ಎಫ್.ಗೆ ಅಳವಡಿಸಲೇಬೇಕೆಂದು ಕಲಂ 102 ಸಿಆರ್‌ಪಿಸಿ ಪ್ರಕಾರ ಕಡ್ಡಾಯವಾಗಿ ನಮೂದಿಸಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಘಟಕಾಧಿಕಾರಿಗಳು ತಮ್ಮ ಅಧೀನದಲ್ಲಿನ ಠಾಣಾ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡಿ ಸಿಆರ್‌ಪಿಸಿ ಕಲಂ 136 ಅನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಸೂಚನೆಗಳನ್ನು ನೀಡಲಾಗಿರುತ್ತದೆ.

ಅ) ಮಾರಣಾಂತಿಕ ಮತ್ತು ಇತರ ಗಂಭಿರವಾಗಿ ಹೊಡೆದು ಪರಾರಿಯಾದ (ಹಿಟ್ ಅಂಡ್ ರನ್) ಗುನ್ನೆಗಳಲ್ಲಿ ವಾಹನಗಳನ್ನು ಪಿ.ಎಫ್.ಗೆ ಹಾಕುವ ಸಂದರ್ಭ ಬಂದಾಗ ಮಾತ್ರ ಉಪವಿಭಾಗಾಧಿಕಾರಿ ಅನುಮತಿ ಪಡೆದು ಪಿ.ಎಫ್.ಗೆ ಹಾಕುವ ಕ್ರಮವನ್ನು ತೆಗೆದುಕೊಳ್ಳಬಹುದು. ಇಂತಹ ಸಂದರ್ಭ ಬಹಳ ಅಪರೂಪ ಸಹ ಎಂದು ಗಮನಿಸಬಹುದು. ಈ ಸಂದರ್ಭದಲ್ಲಿ ಸಹ ಆದಷ್ಟು ಬೇಗ ತನಿಖೆಯನ್ನು ಮುಗಿಸಿ ಮಾಲೀಕರಿಗೆ ವಾಹನವನ್ನು ಹಿಂತಿರುಗಿಸುವ ಕ್ರಮವನ್ನು ಕೈಗೊಳ್ಳಬೇಕು.

ಆ) ಇತರ ಎಲ್ಲಾ ಅಪಘಾತ ಗುನ್ನೆಗಳಲ್ಲಿ ವಾಹನವನ್ನು ಮೋಟಾರು ವಾಹನ ಪರಿವೀಕ್ಷಣೆ ಆದ ಕೂಡಲೇ ರಾಜ್ಯದ ಹಾಗೂ ಹೊರರಾಜ್ಯದ ವಾಹನದ ಮಾಲೀಕರಿಂದ ವಾಹನದ ಅವಶ್ಯಕತೆ ಇದ್ದಾಗ ಹಾಜರುಪಡಿಸುತ್ತೇವೆಂದು ಮುಚ್ಚಳಿಕೆಯನ್ನು ರೂ.100/- ಛಾಪಾ ಕಾಗದದ ಮೇಲೆ ಬರೆಸಿಕೊಂಡು 24 ಗಂಟೆ ಒಳಗಾಗಿ ಬಿಡುಗಡೆ ಮಾಡಬೇಕು.

ಇ) ವಾಹನದ ದಾಖಲಾತಿಗಳನ್ನು ಇಟ್ಟುಕೊಳ್ಳುವ ಪ್ರಸಂಗ ಬಂದಾಗ ಅವರಿಗೆ ಸೂಕ್ತ ಸ್ವೀಕೃತಿಯನ್ನು ಬರವಣಿಗೆಯ ಮೂಲಕ ಕೊಡಬೇಕು.

ಉಲ್ಲೇಖ-2ರ ಈ ಕಛೇರಿಯ ಪತ್ರದಲ್ಲಿ ಸಿಆರ್‌ಪಿಸಿ 451 & 457 ರೀತ್ಯಾ ಜಪ್ತಿ ಮಾಡಿದ ವಾಹನಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವಂತೆ ಸೂಚಿಸಲಾಗಿತ್ತು. ಮೇಲ್ಕಂಡ ಸುತ್ತೋಲೆ ಮತ್ತು ಪತ್ರವನ್ನು ಮುಂದುವರೆಸುತ್ತಾ ಈ ಕೆಳಕಂಡಂತೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಆದೇಶಿಸಿರುತ್ತದೆ.

ರಸ್ತೆ ಅಪಘಾತ ಪ್ರಕರಣಗಳಲ್ಲಿ, ಐಎಂವಿ ಪ್ರಕರಣಗಳಲ್ಲಿ ಮತ್ತು ವಾರಸುದಾರರಿಲ್ಲದ ವಾಹನಗಳನ್ನು ವಿಲೇವಾರಿಗೊಳಿಸುವ ಬಗ್ಗೆ ಮೇಲ್ಕಂಡ ಉಲ್ಲೇಖಗಳ ಅಡಿಯಲ್ಲಿ ನಿಯಮ ಹಾಗೂ ಸ್ಪಷ್ಟ ಆದೇಶಗಳನ್ನು ನೀಡಿದ್ದು ಠಾಣೆಗಳಲ್ಲಿ ವಿವಿಧ ಕಾರಣಗಳಿಗೆ ವಶಪಡಿಸಿಕೊಂಡಿರುವ ವಾಹನಗಳನ್ನು ವಿಲೇವಾರಿಗೊಳಿಸಲು ಈ ಕೆಳಗಿನಂತೆ ಕ್ರಮಕೈಗೊಳ್ಳಲು ಸೂಚಿಸಿದೆ.

**1. ರಸ್ತೆ ಅಪಘಾತ ಪ್ರಕರಣಗಳಲ್ಲಿ**

**ಅ) ವಿಮಾ ಸೌಲಭ್ಯ ಹೊಂದಿದ್ದರೆ:-**

ರಸ್ತೆ ಅಪಘಾತ ಪ್ರಕರಣಗಳಲ್ಲಿ ಭಾಗಿಯಾದ ವಾಹನವನ್ನು ಪಂಚನಾಮೆ ಮೂಲಕ ತಡೆ ಹಿಡಿದು ಆ ಕುರಿತು ವಾಹನದ ಮಾಲೀಕರಿಗೆ/ಉಸ್ತುವಾರಿ ಹೊಂದಿರುವವರಿಗೆ ಮಾಹಿತಿಯನ್ನು ನೀಡಿ ವಾಹನದ ಯಾಂತ್ರಿಕ ಪರೀಕ್ಷೆಯನ್ನು ಸಾರಿಗೆ ಇಲಾಖೆಯ ಅಧಿಕಾರಿಗಳಿಂದ ಪರೀಕ್ಷೆ ಮಾಡಿಸಿದ ನಂತರ ವಾಹನವನ್ನು ಮಾಲೀಕ/ಉಸ್ತುವಾರಿ ಹೊಂದಿರುವ ವ್ಯಕ್ತಿಗೆ 24 ಗಂಟೆಗಳಲ್ಲಿ ಅಗತ್ಯ ನಿಯಾಮವಳಿ ಪಾಲನೆಯ ನಂತರ ಕೂಡಲೇ ಬಿಡುಗಡೆಗೊಳಿಸುವುದು. (ಕಲಂ-136 ಎಂವಿ ಆಕ್ಟ್ 1988)

**ಆ) ವಿಮಾ ಸೌಲಭ್ಯ ಹೊಂದಿಲ್ಲದಿದ್ದರೆ:-**

- ತನಿಖಾಧಿಕಾರಿಗಳು ಕೂಡಲೇ ವಾಹನವನ್ನು ಜಪ್ತಿ ಪಡಿಸಿಕೊಂಡು ಜಪ್ತಿ ಮಾಡಿಕೊಂಡ ಬಗ್ಗೆ ಮಾಹಿತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುವುದು.

--3

- ಮಾನ್ಯ ನ್ಯಾಯಾಲಯವು ವಾಹನದ ಮಾಲೀಕನಿಂದ ಅಪಘಾತದಲ್ಲಿ ನೊಂದವರಿಗೆ ನ್ಯಾಯಾಲಯದಿಂದ ನೀಡಬಹುದಾದ ಅಪಘಾತ ಪರಿಹಾರ ಮೊತ್ತಕ್ಕೆ ಸಮಾಧಾನಕರವಾದ ಮೊತ್ತವನ್ನು ಠೇವಣಿ ಮಾಡುವ ಮೂಲಕ ಅಥವಾ ಭದ್ರತೆ ನೀಡುವ ಷರತ್ತಿಗೊಳಪಟ್ಟು ವಾಹನವನ್ನು ಬಿಡುಗಡೆ ಮಾಡಬಹುದು.
- ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲ್ ನಂಬರ್-(ಎಸ್) 9936-9937/2016 ರಲ್ಲಿ ನೀಡಿರುವ ಸೂಚನೆಗಳನ್ವಯ ಮೂರು ತಿಂಗಳೊಳಗಾಗಿ ಭದ್ರತೆ ಅಥವಾ ಹಣವನ್ನು ಠೇವಣಿ ಮಾಡುವಲ್ಲಿ ವಿಫಲವಾದರೆ ನ್ಯಾಯಾಧೀಶರು ವಾಹನವನ್ನು ಹರಾಜು ಹಾಕಿ ಹಣವನ್ನು ಪರಿಹಾರ ನೀಡುವ ಟ್ರಿಬ್ಯೂನಲ್ ನ್ಯಾಯಾಲಯದಲ್ಲಿ ಪ್ರಕರಣ ಮುಗಿಯುವವರೆಗೆ ಠೇವಣಿ ಮಾಡುವುದು.

12/4/22

(ಪ್ರವೀಣ್ ಸೂದ್ ಐಪಿಎಸ್)
ಮಹಾ ನಿರ್ದೇಶಕರು ಮತ್ತು
ಆರಕ್ಷಕ ಮಹಾ ನಿರೀಕ್ಷಕರು
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ,

1. ಎಲ್ಲಾ ಪೊಲೀಸ್ ಮಹಾನಿರೀಕ್ಷಕರುಗಳು
2. ನಗರದ ಪೊಲೀಸ್ ಆಯುಕ್ತರುಗಳು
3. ಜಂಟಿ ಪೊಲೀಸ್ ಆಯುಕ್ತರು, ಸಂಚಾರ, ಬೆಂಗಳೂರು
4. ಎಲ್ಲಾ ಪೊಲೀಸ್ ಅಧೀಕ್ಷಕರುಗಳು ಕೆಜಿಎಫ್ ಸೇರಿದಂತೆ

DGP CONTROL ROOM, BENGALURU
O/o. the DG & IGP, N.T.Road, B'luru-1
Out Messages Received for Transmission
NR No. 520 TH. 1655
Date 12/04/22 Sign.

TOR 1755 HRS 12-04-2022 FW:ADDL SP,DCRB,CRM,PA TO SP